ಹೋದಳು. ಅಲ್ಲಿಯ ಮುರಿದ ಕುರ್ಚಿಯ ಮೇಲೆ ಕುಳಿತಳು. ಟ್ರಂಕ್‌ನ್ನು ತೊಡೆಯ ಮೇಲೆಯೇ ಇಟ್ಟುಕೊಂಡಿದ್ದಳು. 'ನಾನು ನಸುಕಿನಲ್ಲಿ ಬಂದು ಎಚ್ಚರಿಸುತ್ತೇನೆ ಹಾಗು ರೈಲು ಹತ್ತಿಸುತ್ತೇನೆ,' ಎಂದು ಹೇಳಿ ಹೊರಟು ಹೋದ.

ಆಕೆಗೆ ಮತ್ತೆ ಯಾವಾಗ ನಿದ್ರೆ ಬಂತೋ ಗೊತ್ತಾಗಲಿಲ್ಲ. ಬೆಳಗಿನ ನಾಲ್ಕುಗಂಟೆಯ ಸುಮಾರು ಎಚ್ಚರಾಯ್ತು. ಟ್ರಂಕು ಇರಲಿಲ್ಲ. ಮುದುಕಿಗೆ ಜೀವ ಹೋದಂತೆನಿಸಿತು. ಬಂದೂಕಿನ ಗುಂಡಿಗಾಗಿ ಕಾಯ್ದು ಕುಳಿತ ಅಡವಿಯ ಪ್ರಾಣಿಯಂತಾಗಿದ್ದಳು. ಹೀಗೆಯೇ ಒಂದು ತಾಸಿನಷ್ಟು ಸಮಯ ಕಳೆದಿರಬಹುದು. ಕೊಠಡಿಯ ಬಾಗಿಲಲ್ಲಿ ಸಪ್ಪಳ ಕೇಳಿಸಿತು. ಕಪ್ಪು ಆಕೃತಿಯೊಂದು ಆಕೆಯ ಕಡೆಗೇ ಬರಹತ್ತಿತು. ಸಮೀಪಕ್ಕೆ ಬರುತ್ತಿದ್ದಂತೆ ಅವನು ಈ ಮೊದಲು ತನ್ನನ್ನು ಭೇಟಿಯಾಗಿದ್ದ ಮೇಲ್ವಿಚಾರಕನಾಗಿದ್ದ.

'ಇನ್ನೇನು ಐದು ನಿಮಿಷದಲ್ಲಿ ರೈಲು ಬರುತ್ತಿದೆ. ಏಳು! ಇಗೋ ನಾನು ರಾತ್ರಿ ಮರಳಿ ಬಂದು ನಿನ್ನನ್ನು ನೋಡಿದಾಗ ನಿನ್ನ ಸಾಮಾನು ಕೆಳಗಿಟ್ಟು ನಿದ್ರೆಗೆ ಹೋಗಿದ್ದೆ. ಸಾಮಾನು ಸುರಕ್ಷಿತವಾಗಿರಲೆಂದು ನನ್ನ ರೂಮಿಗೆ ಒಯ್ದಿದ್ದೆ. ತಗೋ ಇದನ್ನು,' ಎಂದು ಗೋಣಿಚೀಲದ ಟ್ರಂಕನ್ನು ಆಕೆಯ ತೊಡೆಯ ಮೇಲಿಟ್ಟ. ಆಕೆಗೆ ಏನು ಹೇಳಬೇಕೊ ತಿಳಿಯದಂತಾಯ್ತು. ಇನ್ನೂ ಕತ್ತಲಿತ್ತು. ಆಕೆಯ ಕಣ್ಣುಗಳಲ್ಲಿ ನೀರು ಹರಿದು ಹೋಗುತ್ತಿತ್ತು. ರೈಲಿನ ಸಪ್ಪಳ ಕೇಳಿಸಿತು. ಮೇಲ್ವಿಚಾರಕ ಆಕೆಯನ್ನು ಸುರಕ್ಷಿತವಾಗಿ ರೈಲು ಹತ್ತಿಸಿ, ಆಕೆಯ ತೊಡೆಯಮೇಲೆ ಟ್ರಂಕನ್ನಿಟ್ಟು ಕೆಳಗೆ ಇಳಿದ.

ಇನ್ನೇನು ಒಂದುವರೆ ತಾಸಿನ ಹಾದಿ. ನಸುಕಿನ ಆರುವರೆ ಗಂಟೆಗೆ ರಂಗಾಪುರ ತಲುಪುತ್ತಾಳೆ. ಜೀವಕ್ಕೆ ಏನೋ ನೆಮ್ಮದಿ ಉಂಟಾದಂತಾಯ್ತು. ತಾನು ಹತ್ತಿದ್ದ ಬೋಗಿಯಲ್ಲಿ ಮೂರುನಾಲ್ಕು ಜನರು ಮಲಗಿದ್ದರು. ಆಕೆ ಸೀಟುಗಳ ಕೊನೆಯಲ್ಲಿಯೇ ತುದಿಗುಂಡಿಯಲ್ಲಿ ಕುಳಿತಿದ್ದಳು. ಮುಪ್ಪಾವಸ್ಥೆ. ಒಂದು ಗಳಿಗೆ ಎಚ್ಚರಿದ್ದರೆ ಮತ್ತೊಂದು ಗಳಿಗೆ ನಿದ್ರೆ ಬರುತ್ತದೆ. ಕುಳಿತಲ್ಲಿಯೇ ತೂಕಡಿಸಹತ್ತಿದ್ದಳು. ಮತ್ತೆ ಮತ್ತೆ ಕಪ್ಪು ಆಕೃತಿಯೊಂದು ಮನಸ್ಸಿನಲ್ಲಿ ಮೂಡಿ ಮರೆಯಾಗುತ್ತಿತ್ತು. ರೈಲು ದೊಡ್ಡ ಸೀಟಿ ಊದಿತು. ರಂಗಾಪುರದ ಸ್ಟೇಶನ್ನು ಬಂತೆಂದು ಮುದುಕಿ ನಿದ್ದೆಗಣ್ಣಿನಲ್ಲಿಯೇ ರೈಲು ಇಳಿದಳು. ರೈಲು ಮತ್ತೆ ಸೀಟಿ ಊದುತ್ತ ಮುಂದೆ ಹೊರಟಿತು. ರಂಗಾಪುರದ ಸ್ಟೇಶನ್ನಿನಲ್ಲಿ ಮಾಂತಮ್ಮ ಇಳಿದು ಅತ್ತ ಇತ್ತ ನೋಡಿದಳು. ಏನೋ ಕಳೆದುಕೊಂಡೆ ಎಂದು ತನ್ನ ಮೈಮೇಲೆ ಕೈಯಾಡಿಸಿಕೊಂಡಳು. ತಾನು ತಂದಿದ್ದ ಟ್ರಂಕನ್ನು ರೈಲಿನಲ್ಲಿಯೇ ಮರೆತು ಬಿಟ್ಟಿದ್ದಳು. ಆಕೆಯ ಕಣ್ಣುಗಳು ಗಪ್ಪಾದವು. ಮೂಡಣದಲ್ಲಿ ಗರಿಗೆದರುತ್ತಿದ್ದ ಸೂರ್ಯನ ಕಿರಣಗಳು ಆಕೆಯನ್ನು ಮಾತನಾಡಿಸುವ ಉತ್ಸುಕದಲ್ಲಿ ರಾಶಿಯಾಗಿ ಬರಹತ್ತಿದ್ದವು. ಮಾಂತಮ್ಮ ಆ ಬೆಳಕಿನ ಅಗ್ನಿಯಲ್ಲಿ ಭೂಮಿಗೆ ಉರುಳಿದ್ದಳು. ದೂರದಲ್ಲಿ ರೈಲು ಸೀಟಿ ಹಾಕುತ್ತಿತ್ತು.

**ಎಸ್.ಎಫ್. ಯೋಗಪ್ಪನವರ್**

ಬಾಗಲಕೋಟೆ ಜಿಲ್ಲೆ ಬಾದಾಮಿ ತಾಲ್ಲೂಕಿನ ಬೇಲೂರು ಗ್ರಾಮದವರಾದ ಯೋಗಪ್ಪನವರ್ ಕೆ.ಎ.ಎಸ್. ಅಧಿಕಾರಿಯಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದಾರೆ. 'ದೇವರ ಹೆಸರಿನಲ್ಲಿ ಪ್ರಮಾಣ ಮಾಡಿ', 'ಪ್ರೀತಿ ಎಂಬುದು ಚಂದ್ರನ ದಯೆ', 'ಶೋಧ' ಎಂಬ ಕಾದಂಬರಿಗಳನ್ನು, 'ಆರಾಮ ಕುರ್ಚಿ ಮತ್ತು ಇತರ ಕತೆಗಳು', 'ಮ್ಯೂಟೇಶನ್' ಎಂಬ ಕಥಾಸಂಗ್ರಹಗಳನ್ನು ಪ್ರಕಟಿಸಿದ್ದಾರೆ. 'ಮಾಯಾ ಕನ್ನಡಿ', ಜೆ.ಡಿ. ಸಾಲಿಂಜರ್‌ನ ಕಾದಂಬರಿ 'ಹದಿಹರೆಯದ ಒಬ್ಬಂಟಿ ಪಯಣ' ಅವರ ಅನುವಾದಿತ ಪುಸ್ತಕಗಳಾಗಿವೆ.